ಸ್ಟಾಕ್ ಇಟ್ಟಿರುವ ಸಾಮಗ್ರಿ ಬಗ್ಗೆ

೪೯೯ ಶ್ರೀ ಕೆ. ಎಂ. ಪುಟ್ಟು (ಕರಗಾಪಲು).—ಮಾನ್ಯ ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಇಲಾಖೆಯಲ್ಲಿ ಉಪಯೋಗಿಸದೆ ದಾಸ್ತಾನು ಮಾಡಿರುವ ಸಾಮಾಗ್ರಿಗಳಾವುವು (ಪೂರ್ಣ ವಿವರಗಳನ್ನೊದಗಿಸುವುದು)

ಆ) ಈ ರೀತಿ ದಾಸ್ತಾನು ಇಟ್ಟಿರಲು ಕಾರಣಗಳೇನು.

ಇ) ಈ ಇಲಾಖೆಯಲ್ಲಿ ಮೈಕ್ರೊಫೋನ್‌ಗಳ ಸಾಮಗ್ರಿಗಳನ್ನು ಖರೀದಿಸಲಾಗಿದೆಯೇ ಹಾಗೂ ನಿಗದಿಪಡಿಸಲಾದ ಅವಶ್ಯಕತೆ ಎಷ್ಟು ?

ಈ) ಈ ಸಾಮಾಗ್ರಿಗಳನ್ನು ಸರಬರಾಜು ಮಾಡಿದ ಏಜೆನ್ಸಿ ಯಾರು ಹಾಗೂ ಖರೀದಿಸುವಲ್ಲಿ ಅನುಸರಿಸಿದ ನಿಯಮಾವಳಿಗಳೇನು?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು)—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮೈಕ್ರೋಫೋನ್ ಸಾಮಗ್ರಿಗಳನ್ನು ಖರೀದಿಸಲಾಗಿದೆ. ೫೭

ಈ) ಮೆ॥ ಪೂರ್ಣಿಮಾ ಎಲೆಕ್ಟ್ರಿಕಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರೇಟ್ ಕಾಂಟ್ರಾಕ್ಟ್ ಫರ್ಮ್ ಸರಕು ಖರೀದಿ ಇಲಾಖೆಯ ನಿಯಮಾವಳಿಯ ಪ್ರಕಾರ.

೯–೫೫ ಎ. ಎಂ.

ಶ್ರೀ ಕೆ. ಎಂ. ಪುಟ್ಟು.—ರೇಷ್ಮೆ ಇಲಾಖೆಯಲ್ಲಿ ಮೈಕ್ರೋಫೋನ್ ಅಲ್ಲ ಮೈಕ್ರೋಸ್ಕೋಪ್, ಪೆಟ್ರೋಮ್ಯಾಕ್ಸ್ ಶವಾಗಾರಗಳ ಪೆಟ್ಟಿಗೆ, ಕಸ ಗುಡಿಸುವ ಯಂತ್ರ ಮುಂತಾದುವುಗಳನ್ನು ಉಪಯೋಗ ಮಾಡದೇ ಅನೇಕ ಗೈನೇಜ್‌ಗಳಲ್ಲಿ, ಅನೇಕ ಕೇಂದ್ರಗಳಲ್ಲಿ ಅವು ಇರುವುದನ್ನು ನಾನೇ ಕಣ್ಣಾರೆ ನೋಡಿದ್ದೇನೆ ಒಂದೊಂದು ಗೈನೇಜಿನಲ್ಲಿ ೮–೧೦ ಮೈಕ್ರೋಸ್ಕೋಪ್‌ಗಳು ಉಪಯೋಗ ಮಾಡದೇ ಹಾಗೇ ಇವೆ. ಸರ್ಕಾರದ ಗೈನೇಜ್‌ಗಳಲ್ಲಿ ನೂರಕ್ಕೆ ೫೦ ಭಾಗದಷ್ಟು ಮೊಟ್ಟೆಗಳು ನಷ್ಟವಾಗುವಂತಹ ಸಂದರ್ಭದಲ್ಲಿ ಮೈಕ್ರೋಸ್ಕೋಪಿನ ಆಗತ್ಯ ಇತ್ತೇ ಇಲ್ಲವೇ ಎಂದು ಕೇಳುತ್ತೇನೆ. ಮತ್ತೆ ಚಾಕಿ ಸೆಂಟರ್‌ಗಳಲ್ಲಿ ದಿನಗೂಲಿ ನೌಕರರಿಗೆ ಕೆಲಸ ಇಲ್ಲದೇ ಇರುವಾಗ ಕಸ ಗುಡಿಸುವ ಯಂತ್ರವನ್ನು ತೆಗೆದುಕೊಳ್ಳುವ ಆಗತ್ಯ ಅವರಿಗೆ ಇತ್ತೇ ? ೧೫–೬ ಕೋಟಿ ರೂಪಾಯಿ ಬೆಲೆ ಬಾಳುವ ನಿರುಪಯುಂಕ್ತವಾದ ವಸ್ತುಗಳು ಈ ಗೈನೇಜ್‌ಗಳಲ್ಲಿ ಇವೆ. ಅವರು ನಮ್ಮ ಹತ್ತಿರ ಸ್ಟಾಕ್ ಇಲ್ಲವೆಂದು ಹೇಳುತ್ತಾರೆ. ಆಯಾ ಗೈನೇಜು ಗಳಲ್ಲಿ ೮–೧೦ ಮೈಕ್ರೋಸ್ಕೋಪ್ ಇದೆ, ಕಸ ಗುಡಿಸುವ ಯಂತ್ರ ಇದೆ. ಈ ಆಧುನಿಕ ಯುಗದಲ್ಲಿ ಬೀರುಗಳನ್ನು ಕೊಂಡು ಕೊಳ್ಳುವುದಕ್ಕೆ ಬದಲಾಗಿ ಶವ ಮಡಗುವ ಶವಾಗಾರ ಪೆಟ್ಟಿಗೆ ಟ್ರಿಪ್ಪು ಪಾಲು ಗಳನ್ನು ತೆಗೆದುಕೊಂಡಿದ್ದಾರೆ. ಇದರ ಆಗತ್ಯ ಇತ್ತೆ. ಇವನ್ನು ತೆಗೆದುಕೊಳ್ಳುವುದಕ್ಕೆ ಟೆಕ್ನಿಕಲ್ ಒಪೀನಿಯನ್ ಯಾರು ಕೊಟ್ಟರು.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಸದಸ್ಯರು ಕೇಳಿರುತಕ್ಕಂತಹ ಪ್ರಶ್ನೆ ಮೈಕ್ರೋಸ್ಕೋಪ್ ಹಾಗೂ ಕಸ ಗುಡಿಸುವ ಯಂತ್ರದ ಬಗ್ಗೆ ಇಲ್ಲ. ಅವರು ಈ ಇಲಾಖೆಯಲ್ಲಿ ಮೈಕ್ರೋಫೋನ್ ಸಾಮಗ್ರಿಗಳನ್ನೊ ಖರೀದಿಸಲಾಗಿದೆಯೇ ಎಂದು ಕೇಳಿದ್ದಾರೆ. ಮಾನ್ಯ ಸದಸ್ಯರು ಈಗ ಏನು ಕೇಳಿದ್ದಾರೋ ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು – ರೇಷ್ಮೆ ಇಲಾಖೆಯಲ್ಲಿ ಉಪಯೋಗಿಸದೇ ದಾಸ್ತಾನು ಮಾಡಿರುವ ಸಾಮಗ್ರಿ ಗಳಾವುವು ಇಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಕೆ. ಎಂ ಪುಟ್ಟು.—ಉಪಯೋಗಿಸದೇ ಇರುವ ಸಾಮಾನುಗಳು ಇಲ್ಲವೆಂದು ಅವರು ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದಾರೆ. ಆದರೆ ೮–೧೦ ಮೈಕ್ರೋಸ್ಕೋಪ್‌ಗಳು, ಕಸ ಗುಡಿಸುವ ಯಂತ್ರಗಳು ರೂಮ್ ಹೀಟರ್‌ಗಳೂ ಕೂಡ ಅನೇಕ ಚಾಕಿ ಸೆಂಟರ್‌ಗಳಲ್ಲಿ ಹಾಗೇ ಬಿದ್ದಿವೆ. ಇದು ಉಪಯುಕ್ತವೇ ಅಥವಾ ನಿರುಪಯುಕ್ತವೇ ಎಂದು ನನಗೆ ಗೊತ್ತಿಲ್ಲ. ಕರ್ನಾಟಕದಲ್ಲಿ ಇದಕ್ಕೆ ಸುಮಾರು ೫–೬ ಕೋಟಿ ರೂಪಾಯಿಗಳಾಗಬಹುದು. ಈ ಮೈಕ್ರೋಸ್ಕೋಪ್ ಅನ್ನು ಉಪಯೋಗ

ಮಾಡುತ್ತಿದ್ದೀರಾ ಇಲ್ಲವೇ ಆದನ್ನು ಉಪಯೋಗ ಮಾಡದಿದ್ದರೆ ಅದಕ್ಕೆ ಕಾರಣ ಏನು ? ಇದನ್ನು ಉಪಯೋಗಿಸುತ್ತಿದ್ದರೆ ಪೊಟ್ಟಿಗಳು ಕೆಡುವ ಸಂಭವ ಜಾಸ್ತಿ ಏಕೆ ಆಗುತ್ತಿತ್ತು ?

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಸದಸ್ಯರು ಮೈಕ್ರೋಫೋನ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ ಆದರೆ ಈಗ ಅವರು ಮೈಕ್ರೋಸ್ಕೋಪ್ ಬಗ್ಗೆ ಕೇಳುತ್ತಿದ್ದಾರೆ. ಇದರಲ್ಲಿ ಯಾವುದು ಸರಿ.

ಶ್ರೀ ರಾಮಾನಾಥ ರೈ.—ಆ ಇಲಾಖೆಯಲ್ಲಿ ಮೈಕ್ರೊಫೋನ್ ಇಲ್ಲವೆಂದು ಅಧಿಕಾರಿಗಳಿಗೆ ಗೊತ್ತಿಲ್ಲವೇ ?

ಅಧ್ಯಕ್ಷರು.—ಅವರು ಕೇಳಿರುವ ಒರಿಜಿನಲ್ ಪ್ರಶ್ನೆಯಲ್ಲಿ ಏನು ಇದೆ ಎಂದು ನೋಡೋಣ. ಅದರಲ್ಲಿ ಮೈಕ್ರೋಫೋನ್ ಎಂದು ಇದೆ. ಖರೀದಿಸಲಾಗಿರುವ ೫೭ ಮೈಕ್ರೋಫೋನ್‌ಗಳು ಸರಿಯಾಗಿ ಕೆಲಸ ಮಾಡುತ್ತಿದೆಯೇ ಎಂದು ಪ್ರಶ್ನೆ ಕೇಳಿ.

ಶ್ರೀ ಕೆ. ಎಂ. ಪುಟ್ಟು.—ಎಲ್ಲಾ ಸಾಮಾನುಗಳು ಎಂದು ಉತ್ತರದಲ್ಲಿದೆ. ಅವರು ಮೈಕ್ರೋಸ್ಕೋಪ್‌ನ್ನು ಕೂಡ ಸೇರಿಸಿಕೊಂಡಿದ್ದಾರೆ ? ಮಳವಳ್ಳಿ ಗ್ರೈನೇಜ್‌ನಲ್ಲಿ ಹತ್ತು ಮೈಕ್ರೋಸ್ಕೋಪ್‌ಗಳು ಕಂಪನಿಯಿಂದ ಹೇಗೆ ಬಂದಿತೋ ಹಾಗೆ ಇವೆ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಇದೊಂದೇ ಅಲ್ಲ. ಇತರ ಎಲ್ಲಾ ಸಾಮಾನುಗಳು ಹಾಗೇ ಇವೆ ಇದಕ್ಕೆ ತಾಪ ಏನು ಉತ್ತರ ಹೇಳುತ್ತೀರಿ ? ಎಲ್ಲ ಕಡೆಯಲ್ಲೂ ಇದೇ ಅವ್ಯವಸ್ಥೆ ಇದೆ ಉಪಯೋಗಿಸುತ್ತಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಹೇಳಂತ್ತಿನ್ನೇನೆ, ಖಂಡಿತವಾಗಿಯೂ ಅದನ್ನು ಉಪಯೋಗ ಮಾಡುತ್ತಿಲ್ಲ. ಕೇವಲ ಕಮಿಷನ್‌ಗೋಸ್ಕರ ಯಾರೋ ೫-೬ ಕೋಟಿ ರೂಪಾಯಿಯಷ್ಟು ಸಾಮಾನುಗಳನ್ನು ಡೆಡ್ ಸ್ಟಾಕ್ ಮಾಡಿದ್ದಾರೆ. ಅವು ಉಪಯುಕ್ತವೆ ಅಥವಾ ಅನುಪಯುಕ್ತವೆ ಎಂಬುದು ಯಾರಿಗೂ ಗೊತ್ತಿಲ್ಲ.

ಶ್ರೀ ಎಂ. ಎಸ್. ಆತ್ಮಾನಂದ —ಮಾನ್ಯ ಅಧ್ಯಕ್ಷರೆ, ಮೈಕ್ರೊಸ್ಕೋಪ್‌ನ್ನು ಇದುವರೆಗೆ ಉಪಯೋಗಿಸದೇ ಇದ್ದರೆ ಅದನ್ನು ಉಪಯೋಗಿಸುವಂತೆ ನಾನು ಅವರಿಗೆ ಆದೇಶ ನೀಡುತ್ತೇನೆ. ಆದರೆ ಮಾನ್ಯ ಸದಸ್ಯರು ಪಾಡಿರತಕ್ಕ ಆಪಾದನೆ ಸತ್ಯಕ್ಕೆ ದೂರವಾವುದು. ಈ ಮೈಕ್ರೊಸ್ಕೋಪನ್ನು ಮಾರ್ಕ್ ಟೆಸ್ಟಿಂಗಿಗೋಸ್ಕರ ಉಪಯೋಗಿಸುತ್ತಾರೆ. ಒಂದು ವೇಳೆ ಅವರು ಅದನ್ನು ಉಪಯೋಗಿಸದಿದ್ದರೆ ಹೆಚ್ಚಾಗಿ ಬಳಕೆಯಲ್ಲಿಲ್ಲದಿದ್ದರೆ ಅದನ್ನು ಉಪಯೋಗಿಸಲಿಕ್ಕೆ ನಾನು ಆದೇಶಕೊಡುತ್ತೇನೆ.

ಶ್ರೀ ಕೆ. ಎಂ. ಪುಟ್ಟು.—ಕೆಲವು ಸಾಮಾನುಗಳನ್ನು ತರಿಸಿ ಬಹಳ ದಿವಸವಾಗಿದೆ. ಇನ್ನೂ ೧೦ ವರ್ಷಗಳಿಗೆ ಆಗುವಷ್ಟು ಸ್ಟಾಕ್ ಇದೆ

ಅಧ್ಯಕ್ಷರು.—ಪ್ರಶ್ನೆ ಕೇಳುವುದು ನಿಮ್ಮ ಜವಾಬ್ದಾರಿ. ಉತ್ತರವನ್ನು ಕೊಡತಕ್ಕದ್ದು ಮಂತ್ರಿಗಳ ಜವಾಬ್ದಾರಿ. ಅವರಿಗೆ ನೀವು ಬರೆದು ಕಳುಹಿಸಿಕೊಡಿ.

ಶ್ರೀ ಕೆ. ಹೆಜ್ ಹನುಮೇಗೌಡ —ಮಾನ್ಯ ಅಧ್ಯಕ್ಷರೆ, ರೇಷ್ಮೆ ಇಲಾಖೆಯಿಂದ ಈ ಗ್ರೈನೇಜ್‌ಗಳಿಗೆ ತರಿಸಿರತಕ್ಕ ಕೆಲವು ಸಾಮಾನುಗಳು ಏನಿವೆ ಅವು ಉಪಯೋಗ ಇಲ್ಲದೇ ಇದ್ದರೂ ಕೂಡ ಅವುಗಳನ್ನು ತರಿಸುವುದಕ್ಕೆ ಆರ್ಡರ್ ಕೊಟ್ಟವರು ಯಾರು ? ಈ ರೀತಿ ತರಿಸಿ ಇಟ್ಟುಕೊಂಡಿರುವುದಕ್ಕೆ ಕಾರಣ ವೇನು ? ಇದರಲ್ಲಿ ಏನಾದರೂ ಅವ್ಯವಹಾರ ನಡೆದಿದ್ದರೆ ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಸಂಬಂಧ ಪಟ್ಟವರ ಮೇಲೆ ಸೂಕ್ತ ಕ್ರಮವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಎಸ್.—ಆತ್ಮಾನಂದ.—ಈ ವಸ್ತುಸ್ಥಿತಿಗೆ ಬೇಕಾದಂತಹ ಸಲಕರಣೆಗಳನ್ನು ಪಿ. ಎಸ್. ಐ. ಫಂಡ್‌ನಿಂದ ತೆಗೆದುಕೊಳ್ಳುತ್ತಾರೆ. ಹಾಗೂ ಸುಮಾರು ೬-೭ ವರ್ಷಗಳಿಂದ ಚಾಕೆ ಕೇಂದ್ರಗಳೆಲ್ಲವಾಗಲಿ, ಸಿಲ್ಕ್ ಫಾರಂಗಳಲ್ಲಾಗಲಿ ಅಥವಾ ಮಾರ್ಕೆಟ್‌ನಲ್ಲಾಗಲಿ ಬೇಕಾದ ಸಾಮಾನುಗಳನ್ನು ಖರೀದಿ ಮಾಡಿರುತ್ತಾರೆ. ಒಂದು ಪಕ್ಷ ಸನ್ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿದ ರೀತಿ ಕಂಡು ಬಂದಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳಲು ನಾನಾವರೂ ಇಚ್ಛಿಸುತ್ತೇನೆ.